ದಶಮಾನೋತ್ಸವ ವರ್ಷ

ಕರ್ನಾಟಕ ರಾಜ್ಯ
ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಂಪುಟ 7 : ಸಂಚಿಕೆ 12 : ಡಿಸೆಂಬರ್ 2010 :

ವಾರ್ಷಿಕ ಚಂದಾ 50/– : ಬೆಲೆ ₹5

## 57ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು

ನಾಡಿನ ಜನತೆಗೆ
ಸಹೋದರತೆ ಮತ್ತು ಶಾಂತಿಯ
ಸಾರಿದ ಕ್ರಿಸ್ತನ ಹಬ್ಬಕ್ಕೆ
ಹಾರ್ದಿಕ ಶುಭಾಶಯಗಳು

– ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಡಳಿತ ಮಂಡಳಿ.






ಒಳಪುಟಗಳಲ್ಲಿ

ಅಧ್ಯಕ್ಷರ ನುಡಿ....2
ಸೌಹಾರ್ದ ಸಹಕಾರಿ ಸಮಾಚಾರಗಳು....3
ಸಂಯುಕ್ತ ಸಹಕಾರಿ ಸಮಾಚಾರಗಳು....4
ಮೈಸೂರಿನಲ್ಲಿ ತರಬೇತಿ ಕಾರ್ಯಕ್ರಮ....5
ಶಿಬಿರಾರ್ಥಿಗಳ ಅನಿಸಿಕೆಗಳು....6–7
ಸಹಕಾರಿ ಛಾಯಾಚಿತ್ರಗಳು....8–9
ಲೇಖನ....10
ಸಹಕಾರಿ ಛಾಯಾಚಿತ್ರಗಳು....11
ನಿಮ್ಮ ಗ್ರಾಹಕರನ್ನು ತಿಳಿದಿರಿ....12

ಸೌಹಾರ್ದ ಸಹಕಾರಿಗಳ ಸಂಖ್ಯೆ 1509



## ಅಧ್ಯಕ್ಷರ ನುಡಿ....

ಸಂಯುಕ್ತ ಸಹಕಾರಿಯು ನಡೆಸಿದ ಸಮಾಲೋಚನೆ ಹಾಗೂ ವಿವಿಧ ಸಭೆ ಸಮಾರಂಭಗಳಲ್ಲಿ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಸಹಕಾರಿಗಳ ಅಭಿಪ್ರಾಯದ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳ ಅಧಿಕಾರಿಗಳಿಗಾಗಿ ಈ ರೀತಿಯ ಅಲ್ಪಾವಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದುವರೆಗೆ 4 ತರಬೇತಿ ಕಾರ್ಯಕ್ರಮಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸಲಾಗಿದೆ.

# ಅರ್ಥಪೂರ್ಣ ತರಬೇತಿ

ಜ್ಞಾನವನ್ನು ಹೆಚ್ಚಿಸಲು ಶಿಕ್ಷಣ. ಕಾರ್ಯದಕ್ಷತೆಯನ್ನು ಹೆಚ್ಚಿಸಲು ತರಬೇತಿ. ಅಸ್ತಿತ್ವವನ್ನು ಸ್ಥಿರೀಕರಿಸಲು ಹಾಗು ಅಭಿವೃದ್ಧಿಪಥದಲ್ಲಿ ಸಾಗಲು ಪ್ರಚಾರ. ಇವು ಒಂದು ಸಂಸ್ಥೆಯ ಬೆಳವಣಿಗೆಯ ಜೀವನಾಡಿ. ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಈ ಕಾರ್ಯಗಳನ್ನು ಸಂಯುಕ್ತ ಸಹಕಾರಿಯು ಯಶಸ್ವಿಯಾಗಿ ನಿರ್ವಹಿಸುತ್ತಿದೆ ಎಂದು ನಾನು ಭಾವಿಸಿದ್ದೇನೆ.

ಸ್ನೇಹಿತರೆ, ಸೌಹಾರ್ದ ಸಹಕಾರಿ ಚಳುವಳಿಯ ದಶಮಾನೋತ್ಸವವನ್ನು ಆಚರಿಸುತ್ತಿರುವ ಈ ಸುಸಂದರ್ಭದಲ್ಲಿ ಮೈಸೂರಿನಲ್ಲಿ ಹಮ್ಮಿಕೊಂಡಿದ್ದ 10 ದಿನಗಳ ವಿಶೇಷ ಅಲ್ಪಾವಧಿ ತರಬೇತಿ ಕಾರ್ಯಕ್ರಮ ಬಹಳ ಅರ್ಥಪೂರ್ಣವಾಗಿತ್ತು. 40 ಪ್ರತಿನಿಧಿಗಳು ರಾಜ್ಯದ ವಿವಿಧ ಸಹಕಾರಿಗಳಿಂದ ಭಾಗವಹಿಸಿದ್ದರು. ಪ್ರತಿನಿಧಿಗಳ ಸರ್ವಾಂಗೀಣ ಅಭಿವೃದ್ಧಿಗೆ ಅವರ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿತ್ತು. ಈ ತರಬೇತಿ ಕಾರ್ಯಕ್ರಮಕ್ಕೆ ತಮ್ಮ ಅಭ್ಯರ್ಥಿಗಳನ್ನು ಕಳುಹಿಸಿ ಪ್ರಯೋಜನ ಪಡೆದುಕೊಂಡ ಸೌಹಾರ್ದ ಸಹಕಾರಿಗಳಿಗೆ ಹಾಗು ಅಭ್ಯರ್ಥಿಗಳಿಗೆ ಅಭಿನಂದನೆಗಳು.

ಸಂಯುಕ್ತ ಸಹಕಾರಿಯು ನಡೆಸಿದ ಸಮಾಲೋಚನೆ ಹಾಗೂ ವಿವಿಧ ಸಭೆ ಸಮಾರಂಭಗಳಲ್ಲಿ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಸಹಕಾರಿಗಳ ಅಭಿಪ್ರಾಯದ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳ ಅಧಿಕಾರಿಗಳಿಗಾಗಿ ಈ ರೀತಿಯ ಅಲ್ಪಾವಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದುವರೆಗೆ 4 ತರಬೇತಿ ಕಾರ್ಯಕ್ರಮಗಳನ್ನು (ಕೆ.ಹೆಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ ಹುಲಕೋಟಿ ಗದಗ ಜಿಲ್ಲೆ , ರಾಷ್ಟ್ರಕವಿ ಕುವೆಂಪು ಶತಮಾನೋತ್ಸವ ಸ್ಮಾರಕ ಭವನ ಕವಿಶೈಲ ಕುಪ್ಪಳ್ಳಿ ಶಿವಮೊಗ್ಗ ಜಿಲ್ಲೆ , ಪ್ರವಾಸಿಗರ ಪ್ರಸಿದ್ಧ ಪ್ರವಾಸಿ ತಾಣ ಕೆಮ್ಮಣಗುಂಡಿ ಚಿಕ್ಕಮಗಳೂರು ಜಿಲ್ಲೆ ಹಾಗು ಬ್ರಹ್ಮಕುಮಾರಿ ಜ್ಞಾನಸರೋವರ ಲಿಂಗದೇವರ ಕೊಪ್ಪಲು ಇಲವಾಲ ಮೈಸೂರು) ಅತ್ಯಂತ ಯಶಸ್ವಿಯಾಗಿ ನಡೆಸಲಾಗಿದೆ. ಉತ್ತಮ ವಿಷಯಗಳು, ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ, ಉತ್ತಮ ಪರಿಸರ, ಪ್ರಶಾಂತ ವಾತಾವರಣ, ಯೋಗ ಶಿಕ್ಷಣ , ಪರಿಸರ ಸಂರಕ್ಷಣೆ, ಆರೋಗ್ಯ ಮತ್ತು ಆಹಾರ ವಿಚಾರಗಳು ಮತ್ತು ವೈದ್ಯಕೀಯ ಸಲಹೆ ನೀಡಿ ಒಬ್ಬ ವ್ಯಕ್ತಿಯ ಸಂಪೂರ್ಣ ವಿಕಸನಕ್ಕೆ ಅವಶ್ಯವೆನಿಸುವ ಆಯಾಮಗಳನ್ನು ಮಾಡಲಾಗಿದೆ. ಭಾಗವಹಿಸಿದ ಅಭ್ಯರ್ಥಿಗಳು ಸೌಹಾರ್ದ ಸಹಕಾರಿಗಳ ಸೇನಾನಿಗಳಾಗಿ ಹೊರಹೊಮ್ಮಿದ್ದಾರೆಂದು ಆಶಿಸಲಾಗಿದೆ. ಸಹಕಾರಿಯ ಅಭಿವೃದ್ಧಿಯಲ್ಲಿ ತಮ್ಮ ಕೊಡುಗೆಯನ್ನು ನೀಡಬಲ್ಲ ಒಬ್ಬ ಜವಾಬ್ದಾರಿಯುತ ಕ್ರಿಯಾಶೀಲ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆಂದು ವರದಿಗಳೂ ಸಹ ಬರುತ್ತಿವೆ. ಇದೊಂದು ಸಂತೋಷಕರ ಹಾಗೂ ಹೆಮ್ಮೆಪಡುವ ವಿಷಯ. ಸಂಯುಕ್ತ ಸಹಕಾರಿಯ ಈ ಪ್ರಯತ್ನ ಸಾರ್ಥಕವೆಂದು ಭಾವಿಸಿದ್ದೇನೆ.

ಸಹಕಾರಿ ಬಂಧುಗಳೆ ಅಭಿವೃದ್ಧಿಯನ್ನು ಬಯಸುವುದಾದರೆ ಈ ಪ್ರಯತ್ನ ನಿರಂತರವಾಗಿ ನಡೆಯಲೇಬೇಕು "ಕ್ಷಣ ಕ್ಷಣ" ಶಿಕ್ಷಣ ವ್ಯವಸ್ಥೆಯ ಅಗತ್ಯತೆ ಇದೆ. ಅದರಲ್ಲಿ ಎರಡು ಮಾತಿಲ್ಲ. ಈ ಬಗ್ಗೆ ಸೌಹಾರ್ದ ಸಹಕಾರಿಗಳು ಹೆಚ್ಚು ಆಸಕ್ತಿವಹಿಸಬೇಕಿದೆ. ಇದು ಆದ್ಯತಾ ವಲಯವಾಗಿ ಕಾರ್ಯನಿರ್ವಹಿಸಬೇಕಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸಂಯುಕ್ತ ಸಹಕಾರಿಯು ಪ್ರತಿ ತಿಂಗಳು ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳಿಗಾಗಿ ಒಂದಿಲ್ಲೊಂದು ಕಾರ್ಯಕ್ರಮ ಹಮ್ಮಿಕೊಳ್ಳುವುದುರ ಜೊತೆಗೆ ಪ್ರತಿ 6 ತಿಂಗಳಿಗೊಂದು ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಲಿದೆ. ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತಿರುವ ಈ ಎಲ್ಲ ಕಾರ್ಯಕ್ರಮಗಳಲ್ಲಿ ತಮ್ಮ ಸಹಕಾರಿಗಳಿಂದ ಭಾಗವಹಿಸುವ ಹಾಗೂ ಪ್ರಯೋಜನ ಪಡೆಯುವ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿರಬೇಕು. ಈ ಕಾರ್ಯಕ್ರಮಗಳ ಗುಣಮಟ್ಟ ಕಾಯ್ದುಕೊಳ್ಳಲು ಹಾಗೂ ಹೆಚ್ಚಿಸಿಕೊಳ್ಳಲು ಸಂಯುಕ್ತ ಸಹಕಾರಿಯು ನಿರಂತರ ಚಿಂತನೆ ಮಾಡುತ್ತಿರುತ್ತದೆ. ನೀವು ನಿಮ್ಮ ಅಭಿಪ್ರಾಯಗಳನ್ನು ಬರೆದು ತಿಳಿಸಿ. ನಿಮ್ಮ ನಿರಂತರ ಸಹಕಾರ ಹಾಗು ಸಲಹೆಗಳಿಗೆ ಸ್ವಾಗತವಿದೆ.

ಎಸ್. ಆರ್. ಸತೀಶಚಂದ್ರ,
ಅಧ್ಯಕ್ಷರು

## ಶ್ರೀ ಭುವನೇಶ್ವರಿ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ತರಬೇತಿ ಶಿಬಿರ

ದಿ: 25-11-2010ರಂದು ಶ್ರೀ ಭುವನೇಶ್ವರಿ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ಕೊಪ್ಪಳ ಜಿಲ್ಲೆಯ ಎಲ್ಲ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳಿಗೆ ಹಾಗು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಶಿಬಿರವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ವಿಶ್ವನಾಥ ಹಿರೇಮಠರವರು ಉದ್ಘಾಟಿಸಿ ಸಹಕಾರಿಗಳಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸುವುದು ಇಂದಿನ ಪೈಪೋಟಿಯುಗದಲ್ಲಿ ಅವಶ್ಯಕವಾಗಿದೆ ಎಂದು ತಿಳಿಸುತ್ತ ಪ್ರತಿಯೊಂದು ಸಹಕಾರಿಯು ಈ ಆದುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಪ್ರಗತಿ ಸಾಧಿಸಲು ಕರೆನೀಡಿದರು.


ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಪ್ಪಳ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ಶೇಖರಗೌಡ ಮಾಲಿಪಾಟೀಲ ರವರು ವಹಿಸಿದ್ದರು. ಸಮಾರಂಭದಲ್ಲಿ ಶ್ರೀ ಭುವನೇಶ್ವರಿ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷ ಶ್ರೀ ಸುಭಾಶಚಂದ ಜೈನ್ ಶ್ರೀವಿಜಕುಮಾರ ರೈಕರ ನಿರ್ದೇಶಕರು ಶ್ರೀ ಭುವನೇಶ್ವರಿ ಸೌಹಾರ್ದ ಸಹಕಾರಿ ಶ್ರೀ ಶ್ರೀಧರಪ್ಪ ತಾಳಿಕೊಟಿ ನಿರ್ದೇಶಕರು ಜಿ.ಸ.ಯೂ.ಕೊಪ್ಪಳ ಮುಂತಾದವರು ಭಾಗವಹಿಸಿ ಮಾತನಾಡಿದರು. ಸಿಂಧನೂರಿನ ಬಸವೇಶ್ವರ ಸೌಹಾರ್ದ ಸಹಕಾರಿಯ ಶ್ರೀ



ಬಿ.ರಾಜಶೇಖರ ಹಾಗೂ ವಿಕಾಶ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಹಾಗು ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ವಿಶ್ವನಾಥ ಹಿರೇಮಠರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಸುಭಾಶಚಂದ ಜೈನ್ ರವರಿಂದ ಸ್ವಾಗತ ಕೊನೆಯಲ್ಲಿ ಶ್ರೀ ಭುವನೇಶ್ವರಿ ಪತ್ತಿನ ಸೌಹಾರ್ದ ಸಹಕಾರಿಯ ವ್ಯವಸ್ಥಾಪಕ ಶ್ರೀ ಬಸವರಾಜ ಹಿರೇಮಠ ವಂದನಾರ್ಪಣೆ ಸಲ್ಲಿಸಿದರು.



ಶ್ರೀ ಸುರೇಶ ಚಂದ್ರಶೇಖರ ಶೆಟ್ಟಿ



ಶ್ರೀ ಶಂಕರಗೌಡರಾಮಗೌಡಾ ಪಾಟೀಲ

## ಶ್ರೀ ಮಹಾತ್ಮಾ ಬಸವೇಶ್ವರ ಸೌಹಾರ್ದ ಸಹಕಾರಿಗೆ ನೂತನ ಪದಾಧಿಕಾರಿಗಳು

ಶ್ರೀ ಮಹಾತ್ಮಾ ಬಸವೇಶ್ವರ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿಯ ಚುನಾವಣೆ ದಿನಾಂಕ 10-11-2010 ರಂದು ನಡೆದು ಶ್ರೀ ಸುರೇಶ ಚಂದ್ರಶೇಖರ ಶೆಟ್ಟಿಯವರನ್ನು ಅಧ್ಯಕ್ಷರಾಗಿ, ಶ್ರೀ ಶಂಕರಗೌಡಾ ರಾಮಗೌಡಾ ಪಾಟೀಲಯವರನ್ನು ಉಪಾಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆಯೆಂದು ಸಹಕಾರಿಯ ಪ್ರಕಟಣೆಯಲ್ಲಿ ತಿಳಿಸಿದೆ. ಶ್ರೀ ಪ್ರತಾಪ ಶಿವಬಾಳಪ್ಪಾ ಪಟ್ಟಣಶೆಟ್ಟಿ ಯಿವರು ತಮ್ಮ ವ್ಯಯಕ್ತಿಕ ಕಾರಣಗಳಿಂದ ನೀಡಿದ ರಾಜಿನಾಮೆ ಹಿನ್ನಲೆಯಲ್ಲಿ ನೂತನ ಪದಾಧಿಕಾರಿಗಳ ಚುನಾವಣೆ ನಡೆಯಿತೆಂದು ಪ್ರಕಟಣೆ ತಿಳಿಸಿದೆ.



## ಶ್ರೀ ರಕ್ಷಾ ಸೌಹಾರ್ದ ಪತ್ತಿನ ಸಹಕಾರಿಯ ಉದ್ಘಾಟನೆ

ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟದಲ್ಲಿ ನೂತನವಾಗಿ ನೊಂದಾಯಿತವಾದ ಶ್ರೀ ರಕ್ಷಾ ಸೌಹಾರ್ದ ಸಹಕಾರಿಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್.ಸತೀಶಚಂದ್ರರವರು ಉದ್ಘಾಟಿಸಿ ಸಮಾಜದಲ್ಲಿ ಸೇವೆ ಮಾಡಲು ಸಹಕಾರಿ ಕ್ಷೇತ್ರದಲ್ಲಿ ಉತ್ತಮ ಅವಕಾಶಗಳಿವೆ. ಈ ಸಹಕಾರಿಯನ್ನು ಬಲಪಡಿಸಿ ಉತ್ತಮವಾಗಿ ನಡೆಸಿ ಸದಸ್ಯರಿಗೆ ನೆರವಾಗಲು ಸಲಹೆನೀಡಿದರು ಮತ್ತು ಶುಭಕೋರಿದರು. ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಹಕಾರಿಗೆ ಶುಭಹಾರೈಸಿದರು.



## ಸ್ನೇಹ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಉದ್ಘಾಟನೆ

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದಲ್ಲಿ ದಿನಾಂಕ 15-9-2010 ರಂದು ನೂತನ ಸಹಕಾರಿ "ಸ್ನೇಹ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ" ಉದ್ಘಾಟನೆ.ಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ನೆರವೇರಿಸಿ ಶುಭ ಕೋರಿದರು. ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಎಸ್. ಎನ್.ವಿಶ್ವನಾಥ, ಚಿಕ್ಕಮಗಳೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ಯಡಗೆರೆ ಸುಬ್ರಮಣ್ಯ ಚಾರ್ಟರ್ಡ ಅಕೌಂಟಂಟ ಶ್ರೀ ಬಿ.ವಿ.ರವೀಂದ್ರನಾಥ ಮುಂತಾದವರು ಭಾಗವಹಿಸಿದ್ದರು.



## ಆದರ್ಶ ಸೌಹಾರ್ದ ಪತ್ತಿನ ಸಹಕಾರಿಗೆ ಅತ್ಯುತ್ತಮ ಸಹಕಾರಿ ಪ್ರಶಸ್ತಿ

57 ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ ಸಂದರ್ಭದಲ್ಲಿ ದಿ: 15-11-2010 ರಂದು ವಿಜಾಪೂರದಲ್ಲಿ ನಡೆದ ರಾಜ್ಯಮಟ್ಟದ ಕಾರ್ಯಕ್ರಮದಲ್ಲಿ ಆದರ್ಶ ಸೌಹಾರ್ದ ಪತ್ತಿನ ಸಹಕಾರಿಗೆ ಜಿಲ್ಲೆಯ "ಅತ್ಯುತ್ತಮ ಸಹಕಾರಿ ಪ್ರಶಸ್ತಿ" ನೀಡಿ ಪುರಸ್ಕರಿಸಲಾಯಿತು, ಸಂಸ್ಥಾಪಕ ಅಧ್ಯಕ್ಷ ಶ್ರೀಮತಿ ಸುವರ್ಣ ಎಸ್.ಕರಡಿ ಹಾಗು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀ ಪ್ರಶಾಂತ ಎಸ್.ಕರಡಿಯವರು ಸ್ವೀಕರಿಸಿದರು. ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷ ಶ್ರೀ ಹೆಚ್. ಕೆ.ಪಾಟೀಲರವರು ಸಚಿವ ಶ್ರೀ ಗೋವಿಂದ ಕಾರಜೋಳ ಉಪಸ್ಥಿತರಿದ್ದರು.




## ಉಡುಪಿಯಲ್ಲಿ ಅವಲೋಕನಾ ಸಭೆ

ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅವಲೋಕನಾ ಸಭೆಯನ್ನು ದಿ : 29–11–2010 ರಂದು ಉಡುಪಿಯ ದಿ ಜನರಲ್ ಇನ್ಸುರನ್ಸ ಕೊ–ಆಪರೇಟಿವ್ ಸೊಸೈಟಿಯ ಸಭಾಂಗಣದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಎಮ್.ಗೋಪಿಕೃಷ್ಣರಾವರವರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಸಭೆಯಲ್ಲಿ ಉಡುಪಿ ಜಿಲ್ಲೆಯ 24 ಸಹಕಾರಿಗಳಲ್ಲಿ 17 ಸಹಕಾರಿಯ ಪದಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸೇರಿದಂತೆ ಒಟ್ಟು 25 ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಭೆಯಲ್ಲಿ ವಿವಿಧ ಸಹಕಾರಿಗಳು ತಾವು ಮಾಡುತ್ತಿರುವ ಕಾರ್ಯಚಟುವಟಿಕೆಗಳ ಬಗ್ಗೆ ವಿವರಣೆ ನೀಡಿದರು. ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಲಾಯಿತು ಹಾಗು ಬಡ್ಡಿಯೇತರ ಆದಾಯಗಳನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಉತ್ತಮವಾಗಿ ಕಾರ್ಯ ನಿರ್ವಹಿಸಲು ಸೂಚಿಸಲಾಯಿತು.



## ಮೈಸೂರಿನಲ್ಲಿ ಅವಲೋಕನಾ ಸಭೆ

ಮೈಸೂರು, ಕೊಡಗು, ಚಾಮರಾಜನಗರ ಹಾಗು ಮಂಡ್ಯ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅವಲೋಕನಾ ಸಭೆಯನ್ನು ದಿನಾಂಕ 26–11–2010 ರಂದು ಮೈಸೂರಿನ ಬ್ರಹ್ಮಕುಮಾರಿ ಜ್ಞಾನಸರೋವರದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ 14 ಸಹಕಾರಿಗಳ 35 ಜನ ಪಧಾಧಿಕಾರಿಗಳು ಹಾಗು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಭಾಗವಹಿಸಿದ್ದರು. ಈ ಸಭೆಯಲ್ಲಿ ವಿವಿಧ ಸಹಕಾರಿಗಳು ತಾವು ಮಾಡುತ್ತಿರುವ ಕಾರ್ಯಚಟುವಟಿಕೆಗಳ ಬಗ್ಗೆ ವಿವರಣೆ ನೀಡಿದರು. ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಲಾಯಿತು ಹಾಗು ಉತ್ತಮವಾಗಿ ಕಾರ್ಯ ನಿರ್ವಹಿಸಲು ಸೂಚಿಸಲಾಯಿತು.

# ತುಮಕೂರಿನಲ್ಲಿ 57 ನೇ ಅಖೀಲ ಭಾರತ ಸಹಕಾರ ಸಪ್ತಾಹದ ಆಚರಣೆ

## ರೈತರಿಗೆ ಶೇಕಡಾ 1 ಬಡ್ಡಿ ದರದಲ್ಲಿ ಕೃಷಿ ಸಾಲ ನೀಡಲು ಚಿಂತನೆ



57 ನೇ ಅಖೀಲ ಭಾರತ ಸಹಕಾರ ಸಪ್ತಾಹದ ಆಚರಣೆಯ ಅಂಗವಾಗಿ ಮಹಿಳೆ ಯುವಜನ ಮತ್ತು ದುರ್ಬಲವರ್ಗದವರ ನಡುವೆ ಸಹಕಾರ ಅಭಿವೃದ್ಧಿ ಮಾದರಿಯನ್ನು ಜನಪ್ರೀಯಗೊಳಿಸುವುದು ಎಂಬ ವಿಷಯವಾಗಿ ಕಾರ್ಯ್ಯಮವನ್ನು ತುಮಕೂರು ಜಿಲ್ಲಾ ಗ್ರಂಥಾಲಯದ ಅಂಗವಾಗಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರೂ ತುಮಕೂರು ಜಿಲ್ಲೆಯ ಉಸ್ತುವಾರಿ ಸಚಿವರೂ ಆದ ಶ್ರೀ ವಿ ಸೋಮಣ್ಣನವರು ಉದ್ಘಾಟಿಸಿ ಕೃಷಿಕರಿಗ್ಯುತ್ತಮ ಸೇವೆನೀಡುವ ಅವಕಾಶ ಸಹಕಾರಿ ಕ್ಷೇತ್ರದಿಂದ ಮಾತ್ರ ಸಹಕಾರಿ ಕ್ಷೇತ್ರದಿಂದ ಉತ್ತಮ ಸಾಧನೆಯಾಗುತ್ತಿದೆ. ಮುಂಬರುವ ದಿನಗಳಲ್ಲಿ ರೈತರಿಗೆ ಶೇಕಡಾ 1 ಬಡ್ಡಿ ದರದಲ್ಲಿ ಕೃಷಿ ಸಾಲ ನೀಡಲು ಸರಕಾರದಲ್ಲಿ ಚಿಂತನೆ ನಡೆಯುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಹಕಾರಿ ಮಹಾಮಂಡಳದ ಅಧ್ಯಕ್ಷ ಶ್ರೀ ಜಿ.ಟಿ.ದೇವೇಗೌಡರವರು ಮಾತನಾಡಿ ದೇಶದಲ್ಲಿ ಎಲ್ಲ ವಿಷಯಗಳಿಗೆ ವಿಶ್ವವಿದ್ಯಾಲಯಗಳಿರುವ ಹಾಗೆ ಸಹಕಾರಿ ವಿಶ್ವವಿದ್ಯಾಲಯದ ಅಗತ್ಯ ಇದೆ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಮನವರಿಕೆಮಾಡಲಾಗಿದೆ. ದಿನಾಂಕ 14 ರಂದು ಮಾನ್ಯ ಮುಖ್ಯಮಂತ್ರಿಗಳೂ ರಾಜ್ಯದಲ್ಲಿ ಸಹಕಾರ ವಿಶಿ ವಿದ್ಯಾಲಯ ಸ್ಥಾಪಿಸಲು ಕ್ರಮವಿಡುವುದಾಗಿ ಘೋಷಣೆ ಮಾಡಿದ್ದಾರೆ. ಇದು ಸಹಕಾರಿಗಳಿಗೆ ಸಂತೋಷದ ವಿಷಯ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್.ಸತೀಶಚಂದ್ರರವರು ಮಾತನಾಡಿ ಈ ದೇಶದಲ್ಲಿ ಸಹಕಾರ ಕ್ಷೇತ್ರದ ಮೂಲಕ "ಹಸಿರು ಕ್ರಾಂತಿ" "ಕ್ಷೀರ ಕ್ರಾಂತಿ" ಗಳು ನಡೆದು ರೈತರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಕಾರಣವಾಗಿದೆ. ಇದೊಂದು ಉತ್ತಮ ಆರ್ಥಿಕ ವ್ಯವಸ್ಥೆಯಾಗಿದ್ದು ಈಗಿನ ಪೈಪೋಟಿಯುಗದಲ್ಲಿ ಸಹಕಾರಿ ಕ್ಷೇತ್ರವು [ರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕಾದರೆ "ಜ್ಞಾನದ ಗಳಿಸುವ ಕ್ರಾಂತಿ" (KNOWLEDGE revolution ) ಆಗಬೇಕಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮಕ್ಕೆ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸಹಯೋಗ ನೀಡಲಾಗಿತ್ತು.

## ಸಂಯುಕ್ತ ಸಹಕಾರಿಯ ಲೆಕ್ಕಪರಿಶೋಧಕರ ಪಟ್ಟಿ ಪರಿಷ್ಕರಣೆಗೆ ಅರ್ಜಿ ಆಹ್ವಾನ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಪ್ರತಿವರ್ಷದಂತೆ ಈ ವರ್ಷವೂ ರಾಜ್ಯದ ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಮಾಡುವ ಸನ್ನದು ಲೆಕ್ಕಪರಿಶೋಧಕರ ಪಟ್ಟಿಯನ್ನು ಪರಿಷ್ಕರಿಸುತ್ತದೆ. ಈ ಪಟ್ಟಿಯಲ್ಲಿ ನೊಂದಾಯಿಸಿಕೊಳ್ಳಲು ಅಪೇಕ್ಷಿತ ಸನ್ನದು ಲೆಕ್ಕ ಪರಿಶೊಧಕರು ಸಂಯುಕ್ತ ಸಹಕಾರಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿ ನಮೂನೆಯು ಸಂಯುಕ್ತ ಸಹಕಾರಿಯ ವೆಬ್ ಸೈಟನಲ್ಲಿ ದೊರೆಯುತ್ತದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 25–12–2010. ಹೆಚ್ಚಿನ ವಿವರಗಳಿಗಾಗಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಲು ಕೋರಿದೆ.

## ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆಗೆ ಸಂಬಂಧಿಸಿದಂತೆ ವಿವರಣೆ

ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 24(2) ರ ರಿತ್ಯಾ ಪ್ರತಿಯೊಂದು ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿಯ ಅಧಿಕಾರದ ಅವಧಿಯು 5 ವರ್ಷದ್ದಾಗಿರುತ್ತದೆ. ಯಾವುದೆ ಸಹಕಾರಿಯ ಚುನಾವಣೆ ಯಾವುದೆ ವರ್ಷದ ಮಧ್ಯಭಾಗದಲ್ಲಿ ನಡೆದರೆ, ಉಳಿದ ಅವಧಿಯನ್ನು ಪೂರ್ಣವರ್ಷವೆಂದು ಭಾವಿಸಬೇಕಾಗುತ್ತದೆ. ಅಂದರೆ ಎಪ್ರೀಲ್ 2006 ರಿಂದ 2007ರ ನಡುವೆ ಯಾವುದೆ ಸಮಯದಲ್ಲಿ ಆಡಳಿತ ಮಂಡಳಿಯು ಅಧಿಕಾರ ವಹಿಸಿಕೊಂಡಿದ್ದರೆ, 31 ಮಾರ್ಚ 2007ಕ್ಕೆ ಒಂದು ವರ್ಷ ಪೂರ್ಣಗೊಂಡಿದೆ ಎಂದು ಭಾವಿಸತಕ್ಕದ್ದು. ತಮ್ಮ ಸಹಕಾರಿಯ ಆಡಳಿತ ಮಂಡಳಿಯು 1 ಎಪ್ರೀಲ್ 2006 ರಿಂದ 31 ಮಾರ್ಚ 2007ರ ನಡುವೆ ಯಾವುದೆ ಸಮಯದಲ್ಲಿ ಅಧಿಕಾರ ವಹಿಸಿಕೊಂಡಿದ್ದರೆ ತಮ್ಮ ಸಹಕಾರಿಯ ಆಡಳಿತ ಮಂಡಳಿ ಚುನಾವಣೆಯು 31 ಮಾರ್ಚ 2011ರೊಳಗೆ ನಡೆಯತಕ್ಕದ್ದು.

ಈ ಬಗ್ಗೆ ಕೂಡಲೆ ಸಂಬಂಧಿಸಿದ ಸಹಕಾರಿ ನಿಬಂಧಕರನ್ನು ಸಂಪರ್ಕಿಸಿ ಚುನಾವಣಾಧಿಕಾರಿಯನ್ನು ನೇಮಕಮಾಡಿಸಿಕೊಂಡು ಚುನಾವಣೆಯನ್ನು ಜರುಗಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಲು ಕೋರಿದೆ.

# ಮೈಸೂರಿನ ಬ್ರಹ್ಮಕುಮಾರಿ ಜ್ಞಾನಸರೋವರದಲ್ಲಿ 10 ದಿನಗಳ ವಿಶೇಷ ತರಬೇತಿ ಕಾರ್ಯಕ್ರಮ ಮುಕ್ತಾಯ



ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ ಗಣ್ಯರಿಂದ ಸಹಕಾರಿ ಗೀತೆವಾಚನ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ದಿನಾಂಕ 25–11–2010 ರಿಂದ ದಿನಾಂಕ 4–12–2010 ರವರೆಗೆ 10 ದಿನಗಳ ಉನ್ನತ ಮಟ್ಟದ ಅಲ್ಪಾವಧಿ ತರಬೇತಿ ಕಾರ್ಯಕ್ರಮವನ್ನು ಮೈಸೂರಿನ ಬ್ರಹ್ಮಕುಮಾರಿ ಜ್ಞಾನಸರೋವರದಲ್ಲಿ ಏರ್ಪಡಿಸಲಾಗಿತ್ತು.

ಉದ್ಘಾಟನಾ ಕಾರ್ಯಕ್ರಮ. ದಿನಾಂಕ 25 –11–2010 ರಂದು ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಎಸ್.ಆರ್.ಲಕ್ಷ್ಮೀಕಾಂತ ರೆಡ್ಡಿಯವರು ಹಾಗೂ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ದೀಪ ಬೆಳಗಿಸಿ ಉದ್ಘಾಟಿಸಿದರು. ಶ್ರೀ ಸತೀಶಚಂದ್ರರವರು ಮಾತನಾಡಿ ಸೌಹಾರ್ದ ಸಹಕಾರಿಗಳ ಉತ್ತಮ ಕಾರ್ಯನಿರ್ವಹಣೆಯಲ್ಲಿ ಸಿಬ್ಬಂದಿಗಳ ಪಾತ್ರ ಅತ್ಯಂತ ಮಹತ್ವದ್ದು. ಸೌಹಾರ್ದ ಸಹಕಾರಿಗಳ ಸೇನಾನಿಗಳಾಗಿ ಕಾರ್ಯ ನಿರ್ವಹಿಸ ಬೇಕಾಗುತ್ತದೆ. ಅವರಲ್ಲಿ ಹೆಚ್ಚಿನ ಪರಿಣಿತಿ ಇರಬೇಕಾಗುತ್ತದೆ. ಹೀಗಾಗಿ ಸಂಯುಕ್ತ ಸಹಕಾರಿಯು ಇಂತಹ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ತಿಳಿಸಿದರು.

ಸ್ವಾಗತ ಹಾಗೂ ಪ್ರಾಸ್ತಾವಿಕವಾಗಿ ಮಾತನಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ ಈಗ 1500ನ್ನು ದಾಟಿರುತ್ತದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಅಗತ್ಯವಾದ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತಿದೆ. ವಿಶೇಷವಾಗಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ ಇದು 4ನೇಯ ತರಬೇತಿ ಕಾರ್ಯಕ್ರಮವಾಗಿದೆ. ಸಿಬ್ಬಂದಿವರ್ಗದವರಿಗಾಗಿ ಪ್ರತಿ 6 ತಿಂಗಳಿಗೊಂದು ಬಾರಿ ಹಮ್ಮಿಕೊಳ್ಳುತ್ತಿರುವ ಈ ಕಾರ್ಯಕ್ರಮ ವಿಶೇಷದ್ದಾಗಿರುತ್ತದೆ. ಸ್ಥಳದ ಆಯ್ಕೆ, ವಿಷಯಗಳ ಆಯ್ಕೆ, ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಪ್ರತಿನಿಧಿಗಳಿಗೆ ಊಟ ಉಪಹಾರ ವಸತಿ ಆರೋಗ್ಯ ಹೀಗೆ ಪ್ರತಿಯೊಂದು ವಿಷಯದಲ್ಲಿ ಕಾಳಜಿ ವಹಿಸಿ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಹೀಗಾಗಿ ಈ ಕಾರ್ಯಕ್ರಮಗಳು ಚೆನ್ನಾಗಿ ನಡೆಯುತ್ತಿವೆ. ಹಿಂದೆ ಕೆ.ಹೆಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ ಹುಲಕೋಟಿ ಗದಗ ಜಿಲ್ಲೆ , ರಾಷ್ಟ್ರಕವಿ ಕುವೆಂಪು ಶತಮಾನೋತ್ಸವ ಸ್ಮಾರಕ ಭವನ ಕವಿಶೈಲ ಕುಪ್ಪಳ್ಳಿ ಶಿವಮೊಗ್ಗ ಜಿಲ್ಲೆ, ಪ್ರವಾಸಿಗರ ಪ್ರಸಿದ್ಧ ಪ್ರವಾಸಿ ತಾಣ ಕೆಮ್ಮಣಗುಂಡಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಡೆಸಿದ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿ ನಡೆದಿವೆ. ಈ ಕಾರ್ಯಕ್ರಮವೂ ಇದೇ ರೀತಿ ಯಶಸ್ವಿಯಾಗಿ ನಡೆಯಲೆಂದು ಹಾರೈಸಿದರು. ಕಾರ್ಯಕ್ರಮದಲ್ಲಿ ಬ್ರಹ್ಮಕುಮಾರಿ ಜ್ಞಾನಸರೋವರದ ಶ್ರೀಮತಿ ಶಾರದಾರವರು ಮಾತನಾಡಿ ಎಲ್ಲರಿಗೂ ಶುಭಕೋರಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕ ಹಾಗು ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ಹೆಚ್.ವಿ.ರಾಜೀವರವರು ಮಾತನಾಡಿ 10 ದಿನಗಳ ಈ ತರಬೇತಿ ಅಭ್ಯರ್ಥಿಗಳಿಗೆ ತಮ್ಮ ಜ್ಞಾನದ ಮಟ್ಟವನ್ನು ಸುಧಾರಿಸಿಕೊಳ್ಳಲು ಹಾಗು ಅವರಲ್ಲಿ ಕ್ರಿಯಾಶೀಲತೆಯನ್ನು ಹೆಚ್ಚಿಸಲು ಪೂರಕವಾಗಲಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಎಲ್ಲ ನಿರ್ದೇಶಕರು ಉಪಸ್ಥಿತರಿದ್ದು ಶುಭಕೋರಿದರು. ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡಾ ಪಾಟೀಲ ವಂದನಾರ್ಪಣೆ ಸಲ್ಲಿಸಿದರು.

10 ದಿನಗಳ ತರಬೇತಿ ಕಾರ್ಯಕ್ರಮದ ಈ ಅವಧಿಯಲ್ಲಿ ಸಹಕಾರ ತತ್ವಗಳು, ಸಹಕಾರ ಇತಿಹಾಸ,ಸೌಹಾರ್ದ ಸಹಕಾರ ಕಾಯ್ದೆ, 1959ರ ಸಹಕಾರ ಕಾಯ್ದೆ ವ್ಯತ್ಯಾಸಗಳು, ಕಚೇರಿ ಆಡಳಿತ ,ಸಮಯ ನಿರ್ವಹಣೆ, ಒತ್ತಡ ನಿರ್ವಹಣೆ, ಸಾಲ ದಾಖಲಾತಿ, ಸಾಲ ವಸೂಲಾತಿ ಕ್ರಮಗಳು, ಹಣಕಾಸಿನ ನಿರ್ವಹಣೆ, ಆದಾಯ ತೆ–ರಿಗೆ ಕಾಯ್ದೆ ಹಾಗು ಇತರೆ ತೆರಿಗೆ ಕಾಯ್ದೆಗಳ ಮುಖ್ಯಾಂಶಗಳು, ವ್ಯಕ್ತಿತ್ವ ವಿಕಾಸನ, ಪರಿಣಾಮಕಾರಿ ಸಂವಹನ, ಗ್ರಾಹಕ ಸಂಬಂದಗಳ ನಿರ್ವಹಣೆ, ಇ–ಸ್ಟಾಂಪಿಂಗ ವಿವರಗಳು, ಲೆಕ್ಕಪತ್ರಗಳ ನಿರ್ವಹಣೆ, ಲೆಕ್ಕಪರಿಶೋಧನೆ, ಲೆಕ್ಕ ಪರಿಶೋಧನೆಗೆ ಸಿದ್ಧತೆ , ಆಡಳಿತ ಮಂಡಳಿ ಸಭೆ ನಡೆಸುವ ವಿಧಾನಗಳು, ಅಜೆಂಡಾ,ಕೋರಂ,ನಡುವಳಿಕೆಗಳ ರಿಕಾರ್ಡ ಮಾಡುವುದು ಇತ್ಯಾದಿ ಪ್ರಾಯೋಗಿಕಗಳು,ಉತ್ತಮ ಸೌಹಾರ್ದ ಸಹಕಾರಿಗಳಿಗೆ ಅಧ್ಯಯನ ಹಾಗು ಪ್ರವಾಸ ಕಾರ್ಯಕ್ರಮ ಯೋಗ ಹಾಗು ಆರೋಗ್ಯದ ಬಗ್ಗೆ ತರಬೇತಿ ನೀಡಲಾಯಿತು. ಉತ್ತಮ ಪರಿಸರ ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಪ್ರತಿದಿನ ಸಂಜೆ ಮನರಂಜನೆ ಹಾಗು ಅನೌಪಚಾರಿಕ ಸಭೆಗಳನ್ನು ನಡೆಸಲಾಯಿತು.

ಸಮಾರೋಪ ಕಾರ್ಯಕ್ರಮ : ದಿನಾಂಕ 4–12–2010 ರಂದು ಅಭ್ಯರ್ಥಿಗಳು ಸಮಾರೋಪ ಕಾರ್ಯಕ್ರವನ್ನು ಏರ್ಪಡಿಸಿದ್ದರು.ಸಮಾರೋಪ ಭಾಷಣವನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಹಾಗು ಮಾಜಿ ಸಹಕಾರ ಮಂತ್ರಿಗಳಾದ ಶ್ರೀ ಜಿ.ಟಿ.ದೇವೆಗೌಡರವರು ಉತ್ತಮ ಪರಿಸರದಲ್ಲಿ ಒಳ್ಳೆಯ ವಿಷಯಗಳನ್ನು ಆಯ್ಕೆಮಾಡಿ ಉತ್ತಮ ಉಪನ್ಯಾಸಕರನ್ನು ಕರೆಯಿಸಿ ಕಾರ್ಯಕ್ರಮ ನಡೆದಿದೆ. ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಪ್ರತಿ ವರ್ಷದಲ್ಲಿ ಈ ರೀತಿಯ 2 ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಯಾಗಿದೆ ಎಂದು ತಿಳಿಸಿ ಎಲ್ಲರಿಗೂ ಶುಭ ಕೋರಿದರು.

ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ವಹಿಸಿದ್ದರು ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ಮೈಸೂರು ಜಿಲ್ಲಾ ಸಹಕಾರ ಯೂನಿಯನ್ನಿನ ಅಧ್ಯಕ್ಷ ಶ್ರೀ ಹೆಚ್.ವಿ ರಾಜೀವ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ ಶ್ರೀ ಬಸವೇಗೌಡ, ಮೈಸೂರು ವಿಭಾಗದ ಜಂಟಿನಿಬಂಧಕ ಶ್ರೀ ಬಿ.ಎಸ್.ಹರೀಶ ಹಾಗೂ ಬ್ರಹ್ಮಕುಮಾರಿ ಜ್ಞಾನಸಾಗರದ ಶ್ರೀ ರಂಗನಾಥಣ್ಣ ಮುಂತಾದವರು ಮಾತನಾಡಿದರು. ಅಭ್ಯರ್ಥಿಗಳು ತಮ್ಮ ಅನಿಸಿಕೆಯನ್ನು ತಿಳಿಸಿದರು.

ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ ಕುಮಾರರವರು ವಂದನಾರ್ಪಣೆ ಮಾಡಿದರು. ಅಭ್ಯರ್ಥಿಗಳ ಪರವಾಗಿ ಶ್ರೀ ನಾಗರಾಜರೆಡ್ಡಿಯವರು ಕಾರ್ಯಕ್ರಮ ನಿರೂಪಣೆ ಮಾಡಿದರು ಶ್ರೀ ರಾಜುರವರು ಸ್ವಾಗತ ಮಾಡಿದರು.



ಶ್ರೀ ಜಿ.ಟಿ. ದೇವೇಗೌಡರಿಗೆ ಅಭಿನಂದನೆ



ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಮೈಸೂರು ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷ
ಶ್ರೀ ಬಸವೇಗೌಡರವರಿಗೆ ಅಭಿನಂದನೆ



ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್. ಸತೀಶಚಂದ್ರ ಹಾಗೂ ಉಪಾಧ್ಯಕ್ಷ
ಶ್ರೀ ಗುರುನಾಥ ಜ್ಯಾಂತೀಕರರವರಿಗೆ ಅಭ್ಯರ್ಥಿಗಳಿಂದ ಸನ್ಮಾನ.



ಶ್ರೀ ಎಚ್.ವಿ.ರಾಜೀವ್ ಅವರಿಗೆ ಸನ್ಮಾನ.



ಸಪ್ತರ್ಷಿ ಸೌಹಾರ್ದ ಸಹಕಾರಿಯಲ್ಲಿ



ಮೈಸೂರು ಕ್ರೆಡಿಟ್ ಸೌಹಾರ್ದ ಸಹಕಾರಿಗೆ ಭೇಟಿ





ಅಭ್ಯರ್ಥಿಗಳಿಗೆ ಯೋಗ ಶಿಕ್ಷಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ.

## ಅಧ್ಯಯನ ಪ್ರವಾಸ



ಚಾಮುಂಡಿ ಬೆಟ್ಟದಲ್ಲಿ...



ಮೈಸೂರು ಅರಮನೆ ಆವರಣದಲ್ಲಿ...



ಶ್ರೀರಂಗಪಟ್ಟಣದಲ್ಲಿ...



ಕೆ.ಆರ್.ಎಸ್.ನಲ್ಲಿ...

## ಮೈಸೂರಿನ ಪರಿವರ್ತನ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರಿಯ 2ನೇ ವಾರ್ಷಿಕ ಮಹಾಸಭೆ



ಪರಿವರ್ತನ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರಿಯ 2ನೇ ವಾರ್ಷಿಕ ಮಹಾಸಭೆಯು ಸಹಕಾರಿಯ ಅಧ್ಯಕ್ಷ ಶ್ರೀಮತಿ ನಂದಾ ಡಿ.ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಹೆಚ್.ವಿ ರಾಜೀವರವರು ಭಾಗವಹಿಸಿ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಈ ಸಹಕಾರಿಯು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದು ಶ್ಲಾಘನೀಯ. ಇನ್ನೂ ಹೆಚ್ಚಿನ ಸದಸ್ಯರನ್ನು ನೊಂದಾಯಿಸಿ ಮಹಿಳೆಯರಿಗೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಈ ಸಹಕಾರಿ ಕಾರ್ಯ ನಿರ್ವಹಿಸಬೇಕೆಂದು ಕರೆನೀಡಿದರು.

## ಹುಬ್ಬಳ್ಳಿಯಲ್ಲಿ ಸನ್ನದು ಲೆಕ್ಕಪರಿಶೋಧಕರ ರಾಜ್ಯಮಟ್ಟದ ಕಾರ್ಯಾಗಾರ



ಹುಬ್ಬಳ್ಳಿಯಲ್ಲಿ ದಿನಾಂಕ 30-10-2010 ರಂದು ರಾಜ್ಯಮಟ್ಟದ ಸನ್ನದು ಲೆಕ್ಕ ಪರಿಶೋಧಕರ ಕಾರ್ಯಗಾರ ಏರ್ಪಡಿಸಲಾಗಿತ್ತು. ಕಾರ್ಯಾಗಾರದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶಚಂದ್ರರವರು ಭಾಗವಹಿಸಿ ಸೌಹಾರ್ದ ಸಹಕಾರಿಗಳ ಲೆಕ್ಕ ಪರಿಶೋಧನೆಯಲ್ಲಿ ಲೆಕ್ಕ ಪರಿಶೋಧಕರ ಪಾತ್ರ ಮಹತ್ವದ್ದಾಗಿದೆ. ಈ ಕಾರ್ಯವನ್ನು ಲೆಕ್ಕಪರಿಶೋಧಕರು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ನೀವುಗಳ ನೀಡುವ ವರದಿಗಳ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುತ್ತದೆ. ಲೆಕ್ಕ ಪರಿಶೋಧನೆಯ ಜೊತೆಗೆ ಸಹಕಾರಿಗಳ ಗುಣಮಟ್ಟ ಸುಧಾರಿಸಲು ಸಲಹೆ ಹಾಗೂ ಮಾರ್ಗ ದರ್ಶನಗಳನ್ನು ನೀಡಬೇಕು ಎಂದು ಹೇಳಿದರು.

ಸಮಾರಂಭದಲ್ಲಿ ಹುಬ್ಬಳ್ಳಿ ಶಾಖೆಯ ಚೇರಮನ್ ಶ್ರೀ ಎಸ್.ಆರ್.ಭಂಡಿವಾಡ ಧವಳಗಿ, ಕಾನಫರನ್ಸ ಸಮೀತಿಯ ಅಧ್ಯಕ್ಷ ಶ್ರೀ ಸಿ.ಆರ್.ಧವಳಗಿ, ಅತಿಥಿ ಉಪನ್ಯಾಸಕರಾಗಿ ಶ್ರೀ ಬಿ.ವಿ.ರವೀಂದ್ರನಾಥ ಅನೇಕ ಹಿರಿಯ ಸನ್ನದು ಲೆಕ್ಕಪರಿಶೋಧಕರು ಭಾಗವಹಿಸಿದ್ದರು.

# ಒತ್ತಡ ನಿರ್ವಹಣೆ : ಭಾಗ-3 ಒತ್ತಡ ಎಂದರೇನು?


ಶ್ರೀ ಬಿ. ಎ. ಮಹದೇವಪ್ಪ
ಜಂಟಿನಿಬಂಧಕರು ಹಾಗೂ
ವ್ಯವಸ್ಥಾಪಕ ನಿರ್ದೇಶಕರು,
ಡಿ.ಸಿ.ಸಿ.ಬ್ಯಾಂಕ್‌ನಿ., ಶಿವಮೊಗ್ಗ.

ಒತ್ತಡ ಎಂದರೇನು...?

ಇಂಗ್ಲೀಷ್‌ನ 'ಸ್ಟ್ರೆಸ್' (ಣಡಿಚಿ)ಪದವನ್ನು ಕನ್ನಡದಲ್ಲಿ 'ಒತ್ತಡ' ಎನ್ನುತ್ತೇವೆ. ಲ್ಯಾಟೀನ್ ಭಾಷೆಯ 'ಸ್ಟ್ರಿಂಗರ್' ಪದವನ್ನು ಇಂಗ್ಲೀಷಿನಲ್ಲಿ 'ಸ್ಟ್ರೆಸ್' ಎನ್ನಲಾಗಿದೆ. 'ಸ್ಟ್ರೆಸ್' ಎಂದರೆ 'ಭಾರ' ಎಂದರ್ಥ. ಒತ್ತಡ ಎಂದರೆ "ಮನಸ್ಸಿಗೆ ಭಾರವಾದ ಭಾವನೆಗಳು" ಎಂದರ್ಥ.

ಒತ್ತಡ ಒಂದು ಮನೋಸ್ಥಿತಿ.

ಅದು ನೆಮ್ಮದಿ ರಹಿತ ಸ್ಥಿತಿ.

ನಮಗೆ ಒಂದು ಸಮಸ್ಯೆ ಬಂದಾಗ ಅದನ್ನು ಎದುರಿಸಲು ದೇಹ ಮತ್ತು ಮನಸ್ಸುಗಳು ಸಿದ್ಧವಾಗಿ, ಆ ಸಮಸ್ಯೆ ಬಗೆಹರಿಯುವವರೆಗೂ, ಅವು ನೆಮ್ಮದಿರಹಿತವಾಗಿರುತ್ತವೆ. ಇದರಿಂದಾಗಿ ಶಕ್ತಿ ವ್ಯಯವಾಗುವುದಲ್ಲದೆ, ಆಯಾಸ ಕಾಣಿಸಿಕೊಳ್ಳುತ್ತದೆ. ಈ ನೆಮ್ಮದಿ ರಹಿತ ಸ್ಥಿತಿ ಮತ್ತು ಆಯಾಸದ ರೂಪವೇ ಒತ್ತಡ.

ಕ್ರಿಸ್ತಪೂರ್ವದಲ್ಲಿ ಒತ್ತಡದ ಹೆಸರೇ ಇರಲಿಲ್ಲ. ಆದಿಮಾನವ ಸ್ವತಂತ್ರವಾಗಿ ಜೀವಿಸಲು ಆರಂಭಿಸಿದಾಗ ಒತ್ತಡ ಪ್ರಾರಂಭವಾಯಿತು. ಅವನು ಈಟುಘಣ ಅಡಿ ಈಟುಘಣ... ಹೋರಾಡು ಅಥವಾ ಪಲಾಯನ ಮಾಡು...ಎನ್ನುವ ಪ್ರಕ್ರಿಯೆಯಿಂದ ಕೆಲಸ ಮಾಡುತ್ತಿದ್ದ. ಉದಾಹರಣೆಗೆ...ಕ್ರೂರ ಮೃಗ ಎದುರಾದಾಗ, ಅದರೊಂದಿಗೆ ಹೋರಾಡಿ ಅದನ್ನು ಸಾಯಿಸುವುದು...ಇಲ್ಲವೇ...ಓಡಿ ಹೋಗಿ ಪ್ರಾಣ ಉಳಿಸಿಕೊಳ್ಳುವುದು ಅವನ ಈಟುಘಣ ಅಡಿ ಈಟುಘಣ ರೀತಿ-ನೀತಿಯಾಗಿತ್ತು. ಅಂದರೆ ಅವನು ಸಂದರ್ಭಕ್ಕೆ ಅನುಗುಣವಾಗಿ ವರ್ತಿಸುತ್ತಿದ್ದ. ಆಹಾರ, ನೀರು, ಲೈಂಗಿಕತೆ, ಸಂತಾನ ಸಂರಕ್ಷಣೆಗಳಂತಹ ಭೌತಿಕ ಸಮಸ್ಯೆಗಳನ್ನು ಬಿಟ್ಟರೆ ಅವನಿಗೆ ಬೇರೆ ಸಮಸ್ಯೆಗಳು ಇರಲಿಲ್ಲ.

ಆದರೆ ನಾಗರಿಕ ಮಾನವನ ಸಮಸ್ಯೆಗಳು ಸಾವಿರಾರು. ಅವುಗಳಲ್ಲಿ ಬೌದ್ಧಿಕ ಮತ್ತು ಭಾವನಾತ್ಮಕ ಸಮಸ್ಯೆಗಳೇ ಹೆಚ್ಚು. ಆರ್ಥಿಕ ಸಮಸ್ಯೆಗಳು..ವೃತ್ತಿಪರ ಸಮಸ್ಯೆಗಳು.. ದಾಂಪತ್ಯಪರ ಸಮಸ್ಯೆಗಳು..ಅನಾರೋಗ್ಯ ಸಮಸ್ಯೆಗಳು..ಅನಗತ್ಯ ಸಮಸ್ಯೆಗಳು... ಅವನನ್ನು ಕಾಡುತ್ತಿವೆ. ಆದಿ ಮಾನವನ ಸಮಸ್ಯೆಗಳಿಗೆ ಹೋಲಿಸಿದರೆ ನಾಗರಿಕ ಮಾನವನ ಸಮಸ್ಯೆಗಳು ನಿಜಕ್ಕೂ ಗಂಭೀರವಾಗಿವೆ. ಏಕೆಂದರೆ ಇಂದಿನ ಮಾನವ...

* ತಾನು ಅಂದುಕೊಂಡಂತೆಯೇ ನಡೆಯಬೇಕೆಂಬ ಹಠಕ್ಕೆ ಬೀಳುತ್ತಿದ್ದಾನೆ.
* ಸಮಸ್ಯೆ ಬಂದಾಗ ಅದನ್ನು ಎದುರಿಸಬೇಕು ಅಥವಾ ತಡೆಯಬೇಕು. ಈ ಎರಡನ್ನೂ ಮಾಡುತ್ತಿಲ್ಲ.
* ಪರಿಸ್ಥಿತಿಗಳೊಂದಿಗೆ ರಾಜಿ ಮಾಡಿಕೊಳ್ಳುತ್ತಿಲ್ಲ.

**ಪರಿಣಾಮ** : ಒತ್ತಡದ ಜೀವನ ಅವನದಾಗಿದೆ. ಒತ್ತಡದ ಜೀವನ ಹೇಗಿರುತ್ತದೆ ಎಂಬುದನ್ನು ಈ ಕೆಳಗಿನ ಉದಾಹರಣೆಯಿಂದ ವಿವರಿಸಬಹುದು...

ಚೀನಾದ ಕ್ರೂರ ಸೇನಾಧಿಕಾರಿಗಳು ಸೆರೆಯಲ್ಲಿದ್ದ ಕೈದಿಗಳನ್ನೆಲ್ಲ ಬರ್ಬರವಾಗಿ ಹಿಂಸಿಸುತ್ತಿದ್ದರು. ಆ ಕೈದಿಗಳ ಕೈಕಾಲುಗಳನ್ನು ಕಟ್ಟಿ ಒಂದೆಡೆ ಕೂರಿಸುತ್ತಿದ್ದರು. ಅನಂತರ ಅವರ ತಲೆಯ ಮೇಲೆ ನೀರಿನ ಚೀಲವನ್ನು ಇಡಲಾಗುತ್ತಿತ್ತು. ಹಗಲು-ರಾತ್ರಿಯೆನ್ನದೆ ಇಡೀ ದಿನ ಒಂದೊಂದೇ ಹನಿ ನೀರು 'ಟಪ್...ಟಪ್...' ಎಂದು ನಿರಂತರವಾಗಿ ಆ ಕೈದಿಗಳ ತಲೆಯ ಮೇಲೆ ಬೀಳುತ್ತಿತ್ತು. ತಲೆಯ ಮೇಲಕ್ಕೆ ತೊಟ್ಟಿಕ್ಕುತ್ತಿದ್ದ ನೀರ ಹನಿ ಕೊನೆಕೊನೆಗೆ ಸುತ್ತಿಗೆಯಲ್ಲಿ ಹೊಡೆದಾಗ ಉಂಟಾಗುವ ಸದ್ದಿನಂತೆಯೇ ಕೇಳಿಸುತ್ತಿತ್ತು. ಇದರಿಂದಾಗಿ ಆ ಕೈದಿಗಳು ಹುಚ್ಚರಂತಾಗುತ್ತಿದ್ದರು. ಇಂಥದೇ ಚಿತ್ರ ಹಿಂಸೆಯನ್ನು ಸ್ಪೇನ್‌ನಲ್ಲಿ ಮತ್ತು ಹಿಟ್ಲರ್‌ನ ಜರ್ಮನ್ ವಿಚಾರಣಾ ಶಿಬಿರಗಳಲ್ಲೂ ನೀಡಲಾಗುತ್ತಿತ್ತು. ಒತ್ತಡ ಕೂಡ ಹಾಗೇನೇ! 'ಟಪ್...ಟಪ್...ಟಪ್...'ಎಂದು ನಿರಂತರವಾಗಿ ತೊಟ್ಟಿಕ್ಕುವ ನೀರ ಹನಿಯ ಹಾಗೆ! 'ಟಪ್, ಟಪ್, ಟಪ್' ಎಂದು ನಿರಂತರವಾಗಿ ತೊಟ್ಟಿಕ್ಕುತ್ತಲೇ ಇರುವ ಒತ್ತಡವು ವ್ಯಕ್ತಿಯನ್ನು ಹುಚ್ಚನನ್ನಾಗಿಸುತ್ತದೆ; ಆತ್ಮಹತ್ಯೆ ದಾರಿಯನ್ನೂ ತೋರಿಸುತ್ತದೆ.

**ಆತ್ಮೀಯ ಓದುಗರೇ... ನಿಮಗೆ ಒಂದು ಪ್ರಶ್ನೆ...**

ನಿಮ್ಮ ಬದುಕನ್ನು ನೀವು ಪ್ರೀತಿಸುವಿರೇನು? ದೀರ್ಘಕಾಲ ಬದುಕಲು, ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಇಚ್ಚಿಸುವಿರೇನು? ಹಾಗಾದರೆ...

ಆಧುನಿಕ ಜಗತ್ತಿನ ಗದ್ದಲ-ಗೊಂದಲಗಳ ನಡುವೆಯೂ ನಿಮ್ಮ ಮನಸ್ಸನ್ನು ಶಾಂತವಾಗಿಟ್ಟುಕೊಳ್ಳಬಲ್ಲಿರಾ...?

ಗದ್ದಲ-ಗೊಂದಲಗಳ ನಡುವೆಯೂ ನಿಮ್ಮ ಮನಸ್ಸನ್ನು ಶಾಂತವಾಗಿಟ್ಟುಕೊಳ್ಳಲು ನಿಮಗೆ ಸಾಧ್ಯವಾದರೆ...ಆ ಸ್ಥಿತಿಯನ್ನು "ನೆಮ್ಮದಿಯ ಸ್ಥಿತಿ" ಅಥವಾ "ಸಹಜ ಸ್ಥಿತಿ" ಅಥವಾ "ಸಮ ಸ್ಥಿತಿ" ಅಥವಾ "ಒತ್ತಡ ರಹಿತ ಸ್ಥಿತಿ" ಎಂದು ಕರೆಯಬಹುದು.

ಯಾವುದೇ ರೀತಿಯ ಒತ್ತಡವಿಲ್ಲದೆ ಇರುವ ವ್ಯಕ್ತಿಯು ಸಮ ಸ್ಥಿತಿಯಲ್ಲಿ ಇರುತ್ತಾನೆ. ಅವನ ದೇಹ ಹಾಗೂ ಮನಸ್ಸಿನ ಕ್ರಿಯೆಗಳು ಸಹಜ ಸ್ಥಿತಿಯಲ್ಲಿ ಇರುತ್ತವೆ. ಅವು ತಮ್ಮ- ತಮ್ಮ ಕೆಲಸಗಳನ್ನು ಕ್ರಮಬದ್ಧವಾಗಿ ಮಾಡಿಕೊಂಡು ಹೋಗುತ್ತವೆ. ಇಂತಹ ವ್ಯಕ್ತಿ ನೆಮ್ಮದಿಯಿಂದ ಇದ್ದಾನೆ ಎಂಬುದನ್ನು ಸೂಚಿಸುತ್ತದೆ. ಉದಾಹರಣೆಗೆ ಇಲ್ಲೊಂದು ಪ್ರಸಂಗವನ್ನು ಗಮನಿಸಿ.

"ಒಂದು ಊರಿನಲ್ಲಿ ಜಾತ್ರೆ ನಡೆಯುತ್ತಿದೆ. ಜಾತ್ರೆ ಎಂದ ಮೇಲೆ ಸಾವಿರಾರು ಜನ ಇರುತ್ತಾರೆ. ಆ ಜಾತ್ರೆಯಲ್ಲಿ ಸಾವಿರಾರು ಜನರ ಮಾತಿನ ಗದ್ದಲ...ಇದರ ಜೊತೆಗೆ ಹೋಟೇಲ್‌ಗಳು... ಅಂಗಡಿಗಳು... ಆಟದ ಮಳಿಗೆಗಳು ಎಲ್ಲವೂ ಇದ್ದೇ ಇರುತ್ತವೆ. ಅಲ್ಲಿಯೂ ಜನರ ಮಾತುಕತೆ..ಗದ್ದಲ ನಡೆದೇ ಇರುತ್ತದೆ. ಜೊತೆಗೆ ದೇವಸ್ಥಾನದಲ್ಲಿ ಗಂಟೆ, ಜಾಗಟೆಯ ಸದ್ದು ಸಹ ಜೊತೆಗೂಡುತ್ತದೆ. ಶಬ್ದ ಸಾಗರದಲ್ಲಿ ಆ ಜಾತ್ರೆ ಮುಳುಗಿರುತ್ತದೆ. ಇಂತಹ ಸನ್ನಿವೇಶದಲ್ಲಿ ನಮಗೆ ಇಷ್ಟವಾದ ಹಾಡಿನ ಸಾಲೊಂದು ಹೋಟೇಲ್‌ನಿಂದ ಕೇಳಿಸುತ್ತದೆ. ಇಂತಹ ಸಂದರ್ಭದಲ್ಲಿ ಎಲ್ಲವನ್ನೂ ಮರೆತು...ಕೇವಲ ಹಾಡಿನ ಕಡೆ ಗಮನ ಹರಿಸಿ...ನಮ್ಮ ಇಷ್ಟವಾದ ಹಾಡನ್ನು ಪೂರ್ಣವಾಗಿ ಕೇಳಿಸಿಕೊಂಡು, ಆನಂದಿಸುವುದು ಇದೆಯಲ್ಲ...ಅದೇ ಒತ್ತಡ ರಹಿತ ಸ್ಥಿತಿ...ಸಹಜ ಸ್ಥಿತಿ...ನೆಮ್ಮದಿಯ ಸ್ಥಿತಿ.

ಆದರೆ...ಈ ನೆಮ್ಮದಿಯ ಸ್ಥಿತಿ ಎಷ್ಟು ಜನರಿಗಿದೆ?

ಉದಾಹರಣೆಗೆ "ರಾತ್ರಿ ನೆಮ್ಮದಿಯಿಂದ ನಿದ್ರೆ ಮಾಡಿದ್ದೇವೆ...

ಬೆಳಿಗ್ಗೆ ಉತ್ಸಾಹದಿಂದ ಎದ್ದಿದ್ದೇವೆ"...

ಈ ಸ್ಥಿತಿಯನ್ನು ನೆಮ್ಮದಿಯ ಸ್ಥಿತಿ...ಎಂದು ಕರೆದುಕೊಳ್ಳೋಣ. ಆದರೆ...

* ನಲ್ಲಿಯಲ್ಲಿ ನೀರು ಬರುತ್ತಿಲ್ಲ
* 8 ಗಂಟೆ ಆದರೂ ಹಾಲು ಬಂದಿಲ್ಲ
* ಪೇಪರ್ ಬಂದಿಲ್ಲ
* ಮಕ್ಕಳು ಇನ್ನೂ ಮಲಗೇ ಇದ್ದಾರೆ
* ಪದೇ ಪದೇ ಫೋನ್ ಬರ್ತಾ ಇದೆ
* ಸ್ನಾನಕ್ಕೆ ನೀರು ರೆಡಿಯಾಗಿಲ್ಲ

ಇವೆಲ್ಲವೂ ತೀರಾ ಸಣ್ಣ ಸಣ್ಣ ವಿಷಯಗಳೇ. ಆದರೆ ಒಂದೊಂದು ಸಾರಿ ಇಂತಹ ಸಣ್ಣ ವಿಷಯಗಳಿಗೇ...ನಮ್ಮ ಮೂಡ್ ಹಾಳಾಗುತ್ತದೆ. ಬೆಳಿಗ್ಗೆಯೇ ಟೆನ್ಷನ್ ಪ್ರಾರಂಭವಾಗುತ್ತದೆ...ಕೋಪ -ಸಿಡುಕು ಶುರುವಾಗುತ್ತದೆ. ಬೆಳಿಗ್ಗೆ ಹಾಸಿಗೆಯಿಂದ ಏಳುವಾಗ ಇದ್ದ ನಮ್ಮ ನೆಮ್ಮದಿಯ ಸ್ಥಿತಿ ಈಗ ನೆಮ್ಮದಿ ರಹಿತ ಸ್ಥಿತಿ ಆಗಿರುತ್ತದೆ.

ಈ ಅನುಭವ ನಮಗೆಲ್ಲರಿಗೂ ಆಗಿರುತ್ತದೆ ಅಲ್ಲವೇ?

**ಮುಂದೆ ಓದಿ...**

ಹಾಗೂ ಹೀಗೂ ರೆಡಿಯಾಗಿ...ಮನೆಯಿಂದ ಕೆಲಸಕ್ಕೆ ಹೊರಟಾಗ ...

* ಟ್ರಾಫಿಕ್ ಜಾಮ್
* ಆದಿನ ಎಲ್ಲವೂ ಅರ್ಜೆಂಟ್ ಕೆಲಸಗಳು
* ವಿಸಿಟರ್ಸ್ ಜಾಸ್ತಿ-ಲಂಚ್‌ಗೂ ಟೈಮಿಲ್ಲ

ಅನ್ನುವ ಪರಿಸ್ಥಿತಿ ಬಂದು ಬಿಟ್ಟರೆ...ಆ ದಿನವೆಲ್ಲಾ ನಮ್ಮ ದೇಹ-ಮನಸ್ಸು ಭಾರ ಅನಿಸುತ್ತದೆ. ಯಾವುದರ ಮೇಲೂ ಆಸಕ್ತಿ ಇರುವುದಿಲ್ಲ. ಒಂದು ರೀತಿಯ ಆಯಾಸವಾಗುತ್ತದೆ. ನೆಮ್ಮದಿ ಇರುವುದಿಲ್ಲ.

ಆದರೆ...ಈ ರೀತಿಯ ಅಂಶಗಳಿಂದ ಅಷ್ಟೇನೂ ಗಂಭೀರ ಒತ್ತಡ ಕಂಡುಬರುವುದಿಲ್ಲ. ಏಕೆಂದರೆ ಇವೆಲ್ಲವೂ ತಾತ್ಕಾಲಿಕ ಸಮಸ್ಯೆ ಮಾತ್ರ. ನಲ್ಲಿಯಲ್ಲಿ ನೀರು ಸರಿಯಾಗಿ ಬಂದರೆ...ಹಾಲು ಮತ್ತು ಪೇಪರ್‌ನವರು ಸರಿಯಾದ ಸಮಯಕ್ಕೆ ಬಂದು ಬಿಟ್ಟರೆ...ನೆಮ್ಮದಿ ರಹಿತ ಸ್ಥಿತಿ ಪುನಃ ಸಹಜ ಸ್ಥಿತಿಗೆ ಬಂದು ಬಿಡುತ್ತದೆ. ಆದರೆ...ಪ್ರತಿ ದಿನವೂ ಇಂತಹ ಸನ್ನಿವೇಶದಲ್ಲಿಯೇ ಬದುಕು ಸಾಗಿಸುವುದಾದರೆ ನಮ್ಮ ದೇಹ ಮತ್ತು ಮನಸ್ಸಿನ ಮೇಲೆ ವ್ಯತಿರಿಕ್ತ ಪ್ರಭಾವ ಉಂಟಾಗುತ್ತದೆ. ಆಗ ನಮ್ಮ ..ನೆಮ್ಮದಿಯ ಸ್ಥಿತಿ ಏರುಪೇರಾಗುತ್ತದೆ. ಈ ರೀತಿ ಏರುಪೇರಾದ ನೆಮ್ಮದಿಯ ಸ್ಥಿತಿ ಪುನಃ ಸಹಜ ಸ್ಥಿತಿಗೆ ಬರಬೇಕಾಗುತ್ತದೆ. ಒಂದು ವೇಳೆ ಈ ಏರು-ಪೇರಿನ ಸ್ಥಿತಿ ದೀರ್ಘಕಾಲ ಇದ್ದು ಬಿಟ್ಟರೆ, ನಮ್ಮ ದೇಹ ಮತ್ತು ಮನಸ್ಸಿನ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿ ಒತ್ತಡದ ಪರಿಣಾಮ ಗಂಭೀರವಾಗುತ್ತದೆ.

ಕೆಲವು ಸಂದರ್ಭಗಳಲ್ಲಿ ನಮಗೆ ನಾವೇ ಒತ್ತಡಗಳನ್ನು ತಂದುಕೊಳ್ಳುತ್ತೇವೆ. ಇದು

ನಮ್ಮ ಮನಸ್ಥಿತಿಗೆ ಸಂಬಂಧಿಸಿದೆ. ನಮ್ಮಲ್ಲಿ ಪಾಸಿಟಿವ್ ಯೋಚನೆಗಳಿದ್ದರೆ, ನಮ್ಮ ದೈನಂದಿನ ಬದುಕು ಆರಾಮವಾಗಿರುತ್ತದೆ. ಆದರೆ ಹೆಚ್ಚಿನವರು ತಮ್ಮ ನೆಗೆಟಿವ್ ಯೋಚನೆಗಳಿಂದ ನೆಮ್ಮದಿಯ ಸ್ಥಿತಿಯನ್ನು ಕಳೆದುಕೊಂಡು ಅನಗತ್ಯ ಒತ್ತಡಕ್ಕೆ ಒಳಗಾಗಿ ಪರಿತಪಿಸುವುದನ್ನು ಇಲ್ಲಿ ಕಾಣಬಹುದು...

| ನೆಗೆಟಿವ್ ಯೋಚನೆ | ಪರಿಣಾಮ |
|---|---|
| * ಸ್ವಂತ ಮನೆ ಇದೆ. ಆದರೆ ಅಣ್ಣನ ಮನೆಯಷ್ಟು ದೊಡ್ಡದಾಗಿಲ್ಲ. | ವ್ಯಥೆ |
| * ನನ್ನ ತಲೆಗೂದಲು ನನ್ನ ಸ್ನೇಹಿತೆಯ ತಲೆಗೂದಲಿನಂತೆ ಉದ್ದವಾಗಿ, ಸುಂದರವಾಗಿಲ್ಲ. | ಅಸೂಯೆ |
| * ನಾನು ದೊಡ್ಡ ಆಫೀಸರ್ ಮಗಳು... ಆದರೆ ನನ್ನ ಗಂಡ ಆಫೀಸರ್ ಅಲ್ಲ. | ಅಶಾಂತಿ |
| * ಮಗನ ಮದುವೆ. ಬರುವ ಸೊಸೆ ನಮ್ಮನ್ನು ವಿಶ್ವಾಸದಿಂದ ನೋಡಿಕೊಳ್ಳುತ್ತಾಳೋ ಇಲ್ಲವೋ | ಆತಂಕ |
| * ಪರೀಕ್ಷೆಗೆ ಚೆನ್ನಾಗಿ ತಯಾರಾಗಿದ್ದೇನೆ, ಆದರೆ ಪ್ರಶ್ನೆಪತ್ರಿಕೆ ಕಷ್ಟವಾಗಿದ್ದರೆ? ಮೌಲ್ಯಮಾಪನ ಸರಿಯಾಗಿ ಆಗದಿದ್ದರೆ.. | ಸಂಶಯ |
| * ಟ್ರಾನ್ಸ್‌ಫರ್ ಆಗಿದೆ, ಹೊಸ ಜಾಗ ಹೇಗಿರುತ್ತದೋ ಮನೆಯವರ ಆರೋಗ್ಯ ಬೇರೆ ಸರಿಯಿಲ್ಲ. | ಚಿಂತೆ |
| * ಏನೇ ಆಗಲಿ ಆತನಿಗೆ ಒಂದು ಪಾಠ ಕಲಿಸೇ ಕಲಿಸ್ತೀನಿ | ದ್ವೇಷ |

ಈ ಅಂಶಗಳು ಹೊರಗಿನಿಂದ ಬಂದ ಒತ್ತಡಕಾರಕ ಅಂಶಗಳಲ್ಲ. ಇದು ಮನುಷ್ಯನೇ ಸ್ವಯಂ ಸೃಷ್ಟಿಸಿಕೊಳ್ಳುವ ಒತ್ತಡ. ಇದು ಮನುಷ್ಯನ ವರ್ತನೆಯನ್ನು ಸೂಚಿಸುತ್ತದೆ. ನಮ್ಮ ವರ್ತನೆಗಳೇ ನಮ್ಮ ಬದುಕನ್ನು ರೂಪಿಸುತ್ತವೆ ಎಂಬುದನ್ನು ಇಲ್ಲಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ನಮ್ಮ ಮನಸ್ಸಿಗೂ ನಾವು ನಡೆಸುವ ಬದುಕಿಗೂ ನೇರ ಸಂಬಂಧವಿದೆ. ಈ ಸಂಬಂಧ ನಮ್ಮ ಆಲೋಚನೆಯ ಮೇಲೆ ನಿಂತಿದೆ.

ಮುಂದುವರೆಯುವುದು...



## ಗೋಕಾಕದಲ್ಲಿ ಶ್ರೀ ಶಾಂಭವಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿಯ ಉದ್ಘಾಟನೆ

ಬೆಳಗಾವಿ ಜಿಲ್ಲೆಯ ಗೋಕಾಕದಲ್ಲಿ ಹೊಸದಾಗಿ ಶ್ರೀ ಶಾಂಭವಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿಯ ಉದ್ಘಾಟನೆಯನ್ನು ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ ಜೊಲ್ಲೆಯವರು ಉದ್ಘಾಟಿಸಿ ಹೊಸದಾಗಿ ಪ್ರಾರಂಭವಾಗಿರುವ ಸಹಕಾರಿಗೆ ಶುಭ ಹಾರೈಸಿದರು. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಎ.ಎಮ್.ಜೋತರವರು ,ಎಸ್.ಎಸ್.ನಿಡಗುಂದಿಯವರು ಹಾಗು ಅನೇಕ ಸಹಕಾರಿ ಗಣ್ಯರು ಉಪಸ್ಥಿತರಿದ್ದರು.



## ಸಹಕಾರಿಗಳಿಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಭೇಟಿ

ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ ಹಾಗು ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರು ದಿನಾಂಕ 25–10–2010 ರಂದು ಮೈಸೂರಿನ ಸಪ್ತಶ್ರೀ ಸೌಹಾರ್ದ ಸಹಕಾರಿಗೆ ಹಾಗು ಮೈಸೂರು ಕ್ರೆಡಿಟ್ ಸೌಹಾರ್ದ ಸಹಕಾರಿಗಳಿಗೆ ಹಾಗೂ ದಿನಾಂಕ 4–12–2010 ರಂದು ಕೊಳ್ಳೆಗಾಲದ ಶ್ರೀ ವಾಸವಿ ಸೌಹಾರ್ದ ಸಹಕಾರಿಗೆ ಭೇಟಿ ನೀಡಿ ಸಹಕಾರಿಗಳ ಕಾರ್ಯ ಚಟುವಟಿಕೆಗಳನ್ನು ಪರಿಶಿಲಿಸಿ ಮರ್ಗದರ್ಶನ ಮಾಡಿದರು. ಈ ಸಮಯದಲ್ಲಿ ಸಹಕಾರಿಗಳ ಅಧ್ಯಕ್ಷರು ನಿರ್ದೇಶಕರು ಹಾಗು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಉಪಸ್ಥಿತರಿದ್ದು ಕಾರ್ಯಚಟುಯವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.



## ವ್ಯವಸ್ಥಾಪಕ ನಿರ್ದೇಶಕರ ಭೇಟಿ

ಸಂಕೇಶ್ವರದ ಶ್ರೀ ಬಸವೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಗೆ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ.ಜಿ.ಪಾಟೀಲ್ರವರು ಬೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಅಪ್ಪಾ ಸಾಹೇಬ ದೇಸಾಯಿ ಹಾಗು ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗದ ಅಧಿಕಾರಿ ಶ್ರೀ ಬಿ.ಎಸ್. ಟೋಪಣ್ಣನವರರವರು ಉಪಸ್ಥಿತರಿದ್ದರು.

## "ಜನವರಿ 1 ರಂದು ಸೌಹಾರ್ದ ಸಹಕಾರಿ ದಿನ"

ದಶಮಾನೋತ್ಸವದ ಅಂಗವಾಗಿ 2011 ಜನವರಿ 1 ರಂದು ಸೌಹಾರ್ದ ಸಹಕಾರಿ ದಿನವನ್ನಾಗಿ ಆಚರಿಸಲು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಕ್ರಮವಿಡಲು ಕೋರಿದೆ. ಇನ್ನು ಮುಂದೆ ಪ್ರತಿ ವರ್ಷ ಜನವರಿ 1 ರಂದು ಸೌಹಾರ್ದ ಸಹಕಾರಿಗಳು "ಸೌಹಾರ್ದ ಸಹಕಾರಿ ದಿನ" ವನ್ನಾಗಿ ಆಚರಿಸಲು ಸೂಚಿಸಲಾಗಿದೆ. ಈ ದಿನದಂದು ಸಹಕಾರಿ ಕಟ್ಟಡದ ಮೇಲೆ ಸಹಕಾರಿ ಧ್ವಜವನ್ನು ಹಾರಿಸುವುದು. ಸಹಕಾರಿಗೆ/ಬ್ಯಾಂಕಿಗೆ ಭೇಟಿ ನೀಡುವ ಪ್ರತಿಯೊಬ್ಬ ಗ್ರಾಹಕ/ಸದಸ್ಯರಿಗೆ ಸಿಹಿ ಹಂಚುವುದು ಸ್ಥಳೀಯವಾಗಿ ವಿದ್ಯಾರ್ಥಿಗಳಿಗೆ ಚರ್ಚೆ ಹಾಗೂ ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಿ ಈ ದಿನದಂದು ಬಹುಮಾನ ವಿತರಣೆ ಮಾಡುವುದು. ಸೌಹಾರ್ದ ಕಾಯ್ದೆಯ ಪ್ರಚಾರ ಕೈಗೊಳ್ಳುವುದು ಪತ್ರಿಕಾ ಹೇಳಿಕೆ/ಪತ್ರಿಕಾಗೋಷ್ಠಿ ನಡೆಸುವುದು. ಗಣ್ಯರನ್ನು ಆಹ್ವಾನಿಸಿ ಸಭಾ ಕಾರ್ಯಕ್ರಮ ನಡೆಸುವುದು. ಸದಸ್ಯರ/ ಠೇವಣಿದಾರರ /ಗ್ರಾಹಕರ ಸಭೆ ನಡೆಸುವುದು. ಸಹಕಾರಿ/ಬ್ಯಾಂಕಿನ ವ್ಯವಹಾರ ವೃದ್ಧಿಗೆ ಪೂರಕವಾದ ಠೇವಣಿ ಸಂಗ್ರಹ/ಉಳಿತಾಯ ಖಾತೆ?ಚಾಲ್ತಿ ಖಾತೆ/ಸಾಲ ನೀಡಿಕೆ ಸಪ್ತಾಹ/ಮಾಸಾಚರಣೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ.

Swabhimani Sahakari, Monthly, Posted at GPO-MBC Post Office 560001,
Posting Day 12th. Reg. No. RNP/BGS/2094/20011-13 Licence to post
RNI No.: KARBILO 2004/18001

# "ನಿಮ್ಮ ಗ್ರಾಹಕರನ್ನು ನೀವು ತಿಳಿದಿರಬೇಕು" "Know Your Customer" norms

**ರಾಜ್ಯದ ಸೌಹಾರ್ದ ಕ್ರೆಡಿಟ್ ಸಹಕಾರಿಗಳು ಹಾಗೂ ಪತ್ತಿನ ಸಹಕಾರಿ ಸಂಘಗಳು ಮೂರನೇಯ ವ್ಯಕ್ತಿಯ ರೂ 50,000ಗಳ ವರೆಗಿನ ಚೆಕ್‌ನ್ನು ಕಲೆಕ್ಟ್ ಮಾಡಲು ಭಾರತೀಯ ರಿಸರ್ವ ಬ್ಯಾಂಕಿನವರು "ನಿಮ್ಮ ಗ್ರಾಹಕರನ್ನು ನೀವು ತಿಳಿದಿರಬೇಕು" ಎಂಬ ಶರತ್ತಿನೊಂದಿಗೆ ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ಭಾರತೀಯ ರಿಸರ್ವ ಬ್ಯಾಂಕಿನವರು ಈ ಬಗ್ಗೆ ಎಲ್ಲ ಬ್ಯಾಂಕಿನವರಿಗೆ ನೀಡಿರುವ ಸುತ್ತೋಲೆಯ ವಿವರಗಳನ್ನು ಪತ್ತಿನ ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಪತ್ತಿನ ಸಹಕಾರಿ ಸಂಘಗಳು ಹಾಗು ಸೌಹಾರ್ದ ಸಹಕಾರಿಗಳು ಮೂರನೇಯ ವ್ಯಕ್ತಿಯ ಚೆಕ್ ಕಲೆಕ್ಷನ್ಗೆ ಸಂಬಂದಿಸಿದಂತೆ ಕಡ್ಡಾಯವಾಗಿ ಈ ಸೂಚನೆಗಳನ್ನು ಪಾಲಿಸಲು ಸೂಚಿಸಿದೆ.**

Guidelines on "Know Your Customer" norms

DBOD.AML.BC.18/14.01.001/2002-03 August 16, 2002

To,

The Chief Executives of

All Commercial banks.

Dear Sir,

**Guidelines on "Know Your Customer" norms**

As part of 'Know Your Customer' (KYC) principle, RBI has issued several guidelines relating to identification of depositors and advised the banks to put in place systems and procedures to help control financial frauds, identify money laundering and suspicious activities, and for scrutiny/monitoring of large value cash transactions. Instructions have also been issued by the RBI from time to time advising banks to be vigilant while opening accounts for new customers to prevent misuse of the banking system for perpetration of frauds. A gist of the past circulars issued on the subjects under reference are listed in the Annexure. Taking into account recent developments, both domestic and international, it has been decided to reiterate and consolidate the extant instructions on KYC norms and cash transactions. The following guidelines reinforce our earlier instructions on the subject with a view to safeguarding banks from being unwittingly used for the transfer or deposit of funds derived from criminal activity (both in respect of deposit and borrowal accounts), or for financing of terrorism. The guidelines are also applicable to foreign currency accounts/transactions.

2. "Know Your Customer" (KYC) guidelines for New accounts

The following KYC guidelines will be applicable to all new accounts with Immediate effect.

2.1 KYC Policy

(i) "Know Your Customer" (KYC) procedure should be the key principle for identification of an individual/corporate opening an account. The customer identification should entail verification through an introductory reference from an existing account holder/a person known to the bank or on the basis of documents provided by the customer.

(ii) The Board of Directors of the banks should have in place adequate policies that establish procedures to verify the bonafide identification of individual/corporate opening an account. The Board should also have in place policies that establish processes and procedures to monitor transactions of suspicious nature in accounts and have systems of conducting due diligence and reporting of such transactions.

2.2 Customer identification

(i) The objectives of the KYC framework should be two fold, (i) to ensure appropriate customer identification and (ii) to monitor transactions of a suspicious nature. Banks should obtain all information necessary to establish the identity/legal existence of each new customer, based preferably on disclosures by customers themselves. Typically easy means of establishing identity would be documents such as passport, driving license etc. However where such documents are not available, verification by existing account holders or introduction by a person known to the bank may suffice. It should be ensured that the procedure adopted does not lead to denial of access to the general public for banking services.(iii) In this connection, we also invite a reference to a Report on Anti Money Laundering Guidelines for Banks in India prepared by a Working Group, set up by IBA, for your guidance. It may be seen that the IBA Working Group has made several recommendations for strengthening KYC norms with anti money laundering focus and has also suggested formats for customer profile, account opening procedures, establishing relationship with specific categories of customers, as well as an illustrative list of suspicious activities.

3. "Know Your Customer" procedures for existing customers

Banks are expected to have adopted due diligence and appropriate KYC norms at the time of opening of accounts in respect of existing customers in terms of our extant instructions referred to in the Annexure. However, in case of any omission, the requisite KYC procedures for customer identification should be got completed at the earliest.

4. Ceiling and monitoring of cash transactions

The extant RBI guidelines on the subject are as under :

(i) Banks are required to issue travellers cheques, demand drafts, mail transfers, and telegraphic transfers for Rs.50,000 and above only by debit to customers' accounts or against cheques and not against cash (Circular DBOD.BP.BC.114/C.469 (81)-91 dated April 19, 1991) Further, the applicants (whether customers or not) for the above transactions for amount exceeding Rs.10,000 should affix permanent (Income tax) account number on the applications (Circular DBOD.BP.BC.92/C469-76 dated August 12, 1976). Since KYC is now expected to establish the identity of the customer and as the issue of

demand draft etc. for Rs.50,000 and above is by debit to account, the requirement for furnishing PAN stands increased uniformly to Rs.50,000/-.

(ii) The banks are required to keep a close watch of cash withdrawals and deposits for Rs.10 lakhs and above in deposit, cash credit or overdraft accounts and keep record of details of these large cash transactions in a separate register. (Circular DBOD.BP.BC.57/21.01.001/95 dated May 4,1995).

(iii) Branches of banks are required to report all cash deposits and withdrawals of Rs.10 lakhs and above as well as transactions of suspicious nature with full details in fortnightly statements to their controlling offices. Besides, controlling offices are also required to apprise their Head offices regarding transactions of suspicious nature. (Circular DBOD.BP.BC.101 /21.01.001/95 dated September 20, 1995).

Early computerization of branch reporting will facilitate prompt generation of such reports.

[illegible] 560 002
[illegible]